





**ಪುಟ್ನಂಜ:** ನಂಜ, ಈ ಬಾರಿ ಕ್ರಿಕೆಟ್ ಟೀಮ್‌ಗೆ ಸೆಲೆಕ್ಟ್ ಆಗೇ ಆಗ್ತೀನಿ ಅಂತ ಹೇಳ್ತಾ ಇದ್ದೆ. ಯಾಕೋ ಆಗ್ಲಿಲ್ಲ?
**ನಂಜ:** ಫಾರ್ಮ್‌ನಲ್ಲಿ ಇಲ್ಲ ಅಂತ ಸೆಲೆಕ್ಷನ್ ಕಮಿಟಿಯವರು ಕೈ ಬಿಟ್ಟವ್ರೆ.
**ಪುಟ್ನಂಜ:** ನಿಮ್ ಕೋಳಿ ಫಾರ್ಮ್‌ನಲ್ಲಿ ಒಂದು ಫೋಟೊ ತೆಗೆಸಿ, ಅವ್ರಿಗೆ ತೋರ್ಸ್‌ಬೇಕಿತ್ತು. ಅವ್ರಿಗೆ ತಲೆ ಮ್ಯಾಲೆ ಹೊಡೆದಂಗೆ ಆಗ್ತಿತ್ತು.

**ಪುಟ್ನಂಜ:** ಅಸುರರು ಕಥೆಗಳಲ್ಲಿ ಇರ್ತಾರೆ, ಕಾವ್ಯಗಳಲ್ಲಿ ಬರ್ತಾರೆ, ಸಿನಿಮಾಗಳಲ್ಲಿ ಬಡಿದಾಡ್ತಾರೆ, ಧಾರಾವಾಹಿಗಳಲ್ಲಿ ಸೆಣಸಾಡ್ತಾರೆ. ಆದ್ರೆ ವಾಸ್ತವದಲ್ಲಿ ಯಾಕಿಲ್ಲ?
**ನಂಜ:** ವಾಸ್ತವದಲ್ಲಿ ಅಸುರರು ಬಕಾಸುರರಾಗಿದ್ದಾರೆ.
**ಪುಟ್ನಂಜ:** ಅಂಥವರು ಎಲ್ಲವ್ರೆ?
**ನಂಜ:** ರಾಜಕಾರಣದಲ್ಲಿ.

**ಪುಟ್ನಂಜ:** ನಂಜ, 'ಮನೆಯ ದೇವಮೂಲೆ ಕೊಂಚ ಎತ್ತರ ಆಗಿದೆ. ಅದನ್ನು ಸರಿ ಮಾಡಿದ್ರೆ ಎಲ್ಲಾ ಸರಿ ಹೋಗುತ್ತೆ' ಅಂತ ಸ್ವಾಮಿಗಳು ಹೇಳಿದ್ರು. ಅವರಿಗೆ ಐದು ಸಾವಿರ ಕೊಟ್ಟೆ, ಐವತ್ತು ಸಾವಿರ ಖರ್ಚು ಮಾಡಿ ದೇವಮೂಲೆನೂ ಸರಿ ಮಾಡಿಸ್ದೆ. ಆದ್ರೂ ಅಂದ್ಕೊಂಡಿದ್ದು ಒಂದೂ ಆಗ್ಲಿಲ್ಲ.
**ನಂಜ:** ಯಾಕಂದ್ರೆ ದೇವರನ್ನೆ ಮೂಲೆಗೆ ಸೇರ್ಸಿದ್ದೀಯಾ ಅದಕ್ಕೆ.

**ನಂಜ:** ಪುಟ್ನಂಜ ಯಾಕೋ ನೀನು ಮೆಸೇಜ್, ವೀಡಿಯೊ, ಫೋಟೊ ಯಾವುದನ್ನು ಫಾರ್ವರ್ಡ್ ಮಾಡಲ್ಲ.
**ಪುಟ್ನಂಜ:** ಜೀವನದಲ್ಲಿ ಫಾರ್ವರ್ಡ್ ಆಗೋದು ಮುಖ್ಯ, ಫಾರ್ವರ್ಡ್ ಮಾಡೋದಲ್ಲ.

**ಮಂಜ:** ಮಳೆ ಹೇಗೆ ಬರುತ್ತೆ?
**ಪುಟ್ನಂಜ:** ಇದು ಕೇಳೋ ಪ್ರಶ್ನೇನ್ಲಾ ಮಂಜ? ಮಳೆ ಹನಿ ಹನಿಯಾಗಿ ಮೇಲಿಂದ ಬರ್ತದೆ ಅಂತ ಆಡೋ ಹುಡುಗ್ರು ಹೇಳ್ತಾರೆ.

**ಪತ್ರಕರ್ತ:** ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಿಂದ ಜನರಿಗೆ ಹೊರೆ ಆಗಲ್ವಾ?
**ಸರ್ಕಾರ:** ಆಗುತ್ತೆ. ಆದರೆ, ಖರೀದಿ ಕಡ್ಡಾಯವಲ್ಲ.

ಫೋನ್ ಇನ್ ಕಾರ್ಯಕ್ರಮ
**ನಂಜ:** ಹಲೋ ನಮಸ್ಕಾರ ಸರ್, ರಾಜ್ಯದ ಮನೆ ಮನೆಯಲ್ಲಿ ಶಾಂತಿ ಸಮಾಧಾನ ನೆಮ್ಮದಿ ಇರಬೇಕಂದ್ರೆ ನೀವು ಒಂದೇ ಒಂದು ಕಾನೂನು ಜಾರಿಗೆ ತರಬೇಕು.
**ಮುಖ್ಯಮಂತ್ರಿ:** ಅದ್ಯಾವ ಕಾನೂನು?
**ನಂಜ:** ಅತ್ತೆ ಸೊಸೆಯಂದಿರು ಒಂದೇ ಮನೇಲಿ ಇರಬಾರದು ಅನ್ನೋ ಕಾನೂನು.

**ಮೇಷ್ಟ್ರು:** ಸಮಯ ಸಂದರ್ಭಕ್ಕೆ ತಕ್ಕಂತೆ ತಲೆ ಓಡಿಸ್ಬೇಕು?
**ವಿದ್ಯಾರ್ಥಿ:** ನಮ್ಮಪ್ಪಾನೂ ಹಂಗೆ ಅಂತಿರ್ತಾರೆ.
**ಮೇಷ್ಟ್ರು:** ಅದರಲ್ಲಿ ತಪ್ಪೇನಿದೆ?
**ವಿದ್ಯಾರ್ಥಿ:** ರಿಕ್ಷಾ ಓಡಿಸ್ಬೋದು, ಬೈಕ್ ಓಡಿಸ್ಬೋದು, ಕಾರು ಓಡಿಸ್ಬೋದು, ಬಸ್ ಓಡಿಸ್ಬೋದು, ತಲೆ ಹ್ಯಾಗ್ ಓಡ್ಸೋದು ಸರ್?

ಪುಟ್ಟಮ್ಮ ರಾಜ್ಯ ಮಹಿಳಾ ಮತ್ತು ಮಕ್ಕಳ ಆರೋಗ್ಯ ಸಚಿವೆ ಭಾಮಾ ಅವರನ್ನು ಭೇಟಿಯಾಗಿ ಹೀಗೆ ಬೇಡಿಕೆ ಸಲ್ಲಿಸಿದರು.
**ಪುಟ್ಟಮ್ಮ:** ಮೇಡಂ, ನಾವು ಅತ್ತೆಯಂದಿರ ಸಂಘವನ್ನು ಅಸ್ತಿತ್ವಕ್ಕೆ ತರಬೇಕು ಅಂತಿದ್ದೀವಿ. ಅದಕ್ಕೆ ನೀವು ಅನುಮತಿ ಕೊಡ್ಬೇಕು.**ಭಾಮಾ:** ಇದು ಮಾತ್ರ ಸಾಧ್ಯವೇ ಇಲ್ಲ.
**ಪುಟ್ಟಮ್ಮ:** ಯಾಕೆ ಮೇಡಂ?
**ಭಾಮಾ:** ಪಕ್ಕದೋರು ಸೊಸೆಯಂದಿರ ಸಂಘ ಕಟ್ತಾರೆ ಅದಕ್ಕೆ.

**ಅಪ್ಪ:** ಕಾಲೇಜ್‌ಗೆ ಓದೋಕೆ ಅಂತ ಕಳಿಸಿದ್ರೆ, ಯಾರ್ದೋ ಬೈಕಲ್ಲಿ ಸುತ್ತಾಡ್ತಿಯಂತೆ.
**ಮಗಳು:** ಲಿಂಗ ಸಮಾನತೆಗೆ ಪ್ರೋತ್ಸಾಹ ಕೊಡ್ಬೇಕು ಅಂತ ನಮ್ ಲೆಕ್ಚರರ್ ಹೇಳವ್ರೆ.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ